**ಸಾಕ್ಷಿಯನ್ನು ದಿಃ 10.02.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – 2 ನೇ ಎದುರುದಾರರ ಪರ ವಕೀಲರಿಂದ**

ಗಾಯಾಳುವಿಗೆ ಶಸ್ತ್ರ ಚಿಕಿತ್ಸೆ ಆಗಿರುವುದಿಲ್ಲ. ಗಾಯಾಳುವಿಗೆ ದೈನಂದಿನ ಕೆಲಸ ಮಾಡಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಭುಜದ ಮೇಲೆ ಕೈ ಎತ್ತಲು ಆಗುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಸಂಬಂಧಪಟ್ಟ ಮೂಳೆ ಕೂಡಿಕೊಳ್ಳಲು 8 ರಿಂದ 12 ವಾರ ಬೇಕಾಗುತ್ತದೆ. ಮೂಳೆಗಳು ಕೂಡಿಕೊಂಡಿರುತ್ತದೆ. ಗಾಯಾಳುವಿಗೆ ಆದ ಗಾಯಗಳಿಗೆ ಶಸ್ತ್ರ ಚಿಕಿತ್ಸೆಯ ಅವಶ್ಯಕತೆ ಇಲ್ಲ ಎಂದರೆ ಸಾಕ್ಷಿಯು ಕೆಲವೊಬ್ಬರಿಗೆ ಶಸ್ತ್ರ ಚಿಕಿತ್ಸೆ ಮಾಡಬೇಕಾಗುತ್ತದೆ ಅದು ಗಾಯದ ಮೇಲೆ ಅವಲಂಬಿತ ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಈ ಪ್ರಕರಣದ ಗಾಯಾಳುವಿಗೆ ಶಸ್ತ್ರ ಚಿಕಿತ್ಸೆ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿ. ಗಾಯಾಳುವಿನ ವೃತ್ತಿಯ ಬಗ್ಗೆ ಗೊತ್ತಿರುವುದಿಲ್ಲ. ಭುಜದ ಮೇಲೆ ಕೈ ಎತ್ತುವ ಕೆಲಸ ಹೊರತು ಪಡಿಸಿ ಬೇರೆ ಎಲ್ಲಾ ಕೆಲಸ ಮಾಡಬಹುದು. tenderness over the AC joint and rotater cuff area ಎಂದು ಹೇಳಿದ್ದು ಸದರಿ ತೊಂದರೆ ಯಾಕಾಗಿದೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಮುಂದುವರೆದು ಸಾಕ್ಷಿಯು ಗಾಯಗಳಿಂದ ಆಗಿರಬಹುದು ಎಂದು ಉತ್ತರಿಸಿರುತ್ತಾರೆ. 10 ವಾರದ ನಂತರ ಆರ್ಮ್ ಪೌಚ್  ತೆಗೆದು ವ್ಯಾಯಾಮ ಮಾಡಲು ಸೂಚಿಸಿರುತ್ತೇನೆ. ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ನಾಲ್ಕು ವಾರ ಬೆಡ್ ರೆಸ್ಟ್ ತೆಗೆದುಕೊಳ್ಳಬೇಕು ಎಂದು ಸಲಹೆ ನಿಡೀರುತ್ತೇನೆ. 2021 ರಲ್ಲಿ ಅಪಘಾತ ಆಗಿದ್ದು ನಾಲ್ಕು ವರ್ಷ ಕಳೆದ ಕಾರಣ ಈಗ ಗಾಯಾಳು ಸಾಮಾನ್ಯವಾಗಿದ್ದಾನೆ ಎಂದರೆ ಸರಿಯಲ್ಲ. ನೋಟೀಫಿಕೇಶನ್ ನಲ್ಲಿ ಕ್ಲಾವಿಕಲ್ ಬೋನ್ ಗೆ ನ್ಯೂನತೆ ಪರಿಗಣಿಸುವ ಅಂಶ ಇಲ್ಲ ಎಂದರೆ ಸರಿಯಲ್ಲ. ಗಾಯಾಳುವಿಗೆ ಸಹಾಯ ಆಗಲಿ ಎಂದು ನ್ಯೂನತೆ ಪರಿಗಣಿಸಿರುತ್ತೇನೆ ಎಂದರೆ ಸರಿಯಲ್ಲ. ಹೊರರೋಗಿಯಾಗಿ ಸಾಕಷ್ಟು ಬಾರಿ ಚಿಕಿತ್ಸೆ ಪಡೆದಿರುತ್ತಾರೆ ಎಂದು ಹೇಳಿದ್ದು ದಾಖಲೆ ಗಾಯಾಳು ಬಳಿ ಇದೆ ಎಂದು ಉತ್ತರಿಸಿರುತ್ತಾರೆ. ಗಾಯಾಳು ಪ್ರತಿ ಬಾರಿ ಬಂದಾಗಲೂ ಹಂತ ಹಂತವಾಗಿ ಗುಣಮುಖರಾಗುತ್ತಿರುವುದು

ಕಂಡು ಬಂದಿರುತ್ತದೆ. ಗಾಯಾಳುವಿಗೆ ಸಹಾಯ ಆಗಲಿ ಎಂದು ನ್ಯೂನತೆ ಪರಿಗಣಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/–

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.